

ನಂಬಿಕೆಯೂ ಇದೆ. ಆದರೆ ಇದು ಐತಿಹಾಸಿಕವಾಗಿ ಸತ್ಯವಲ್ಲದಿರಬಹುದು. ಆದರೆ ಶಂಕರಾಚಾರ್ಯರ ಮಹಾಪ್ರತಿಭೆಗೂ ದಾರ್ಶನಿಕತೆಗೂ ಪರಿಪೂರ್ಣತೆ ಒದಗಿದ್ದು ಕಾಶ್ಮೀರ ಎಂಬ ಶಾರದಾಪೀಠದಲ್ಲಿಯೇ ಹೌದು ಎಂಬ ಹಿತವಾದ ಭಾವವಿಸ್ತಾರವೇ ಭಾರತೀಯ ದಾರ್ಶನಿಕತೆಯ ಹಿಂದಿರುವ ಏಕತೆಯ ಭಾವವನ್ನು ಸ್ಥಿರಗೊಳಿಸುವುದು. ಇಲ್ಲಿಯ ಶಂಕರನನ್ನು ಅಲ್ಲಿ ಮರೆಯಾದಂತೆ ಭಾವಿಸಿಕೊಂಡದ್ದು, ಅಲ್ಲಿಯ ಶಿವನನ್ನು ಇಲ್ಲಿ ನಟರಾಜನನ್ನಾಗಿ ಸಾಕ್ಷಾತ್ಕರಿಸಿಕೊಂಡದ್ದು – ಇದೇನು ಕಡಿಮೆ ಮಹತ್ವದ ಭಾವಾನುಸಂಧಾನವೇ?

ಕಾಶ್ಮೀರದ ದರ್ಶನಪರಂಪರೆಯಲ್ಲಿ ತುಂಬ ಗಣ್ಯಸ್ಥಾನವನ್ನು ಪಡೆದುಕೊಂಡಿರುವುದು 'ಪ್ರತ್ಯಭಿಜ್ಞಾದರ್ಶನ'. ಈ ದರ್ಶನನ್ನು ಪರಿಷ್ಕರಿಸಿದವನು ಕೂಡ ಅಭಿನವಗುಪ್ತನೇ. ನಮ್ಮತನದ ದಿಟವಾದ ಅರಿವೇ ಶಿವಾನುಭವ; ಈ ಅರಿವನ್ನು ಮತ್ತೆ ನಮಗೆ ಒದಗಿಸಲು ಜಗತ್ತಿನ ಯಾವ ತಿಳಿವಳಿಕೆಯೂ ಗುರುತಾಗಬಹುದು – ಎನ್ನುವುದು ಈ ದರ್ಶನದ ತಿರುಳು. ನಾವು ಹೃದಯದಲ್ಲಿ ಶಿವನನ್ನು ತುಂಬಿಕೊಂಡಾಗ ಎಲ್ಲೆಲ್ಲೂ ಶಿವನೇ ಕಂಗೊಳಿಸುತ್ತಾನೆ (ವಸ್ತುತಃ ಶಿವಮಯೇ ಹೃದಿ ಸ್ಫುಟಂ ಸರ್ವತಃ ಶಿವಮಯಂ ವಿರಾಜತೇ) – ಎಂದಿದ್ದಾನೆ, ಅಭಿನವಗುಪ್ತ. ಶಿವ ಎಂದರೆ ಮಂಗಳಕರವಾದದ್ದು; ಶುಭವಾದದ್ದು; ಹಿತವಾದದ್ದು, ಸುಂದರವಾದದ್ದು; ಸತ್ಯವಾದದ್ದು. ಕಾಶ್ಮೀರವು ಕಳೆದುಕೊಂಡಿರುವ ಶಿವತ್ವವನ್ನು ಮತ್ತೆ ಪಡೆಯುವಂತಾಗಲಿ; ಶಾರದಾಪೀಠದ ವೈಭವ ಮರುಕಳಿಸಲಿ. ನಮ್ಮತನದ ಸಾಕ್ಷಾತ್ಕಾರಕ್ಕೆ ಕಾಶ್ಮೀರ ನಮ್ಮ ಪಾಲಿಗೆ ಅಭಿಜ್ಞಾನವಾಗಲಿ.

ಅಭಿನವಗುಪ್ತನ ವಂಶಸ್ಥರು ಈಗಲೂ ಕಾಶ್ಮೀರದಲ್ಲಿ ಇದ್ದಾರೆಂದು ಹೇಳುವುದುಂಟು. ಕಾಶ್ಮೀರ ಶೈವದರ್ಶನ ಪರಂಪರೆಯ ಕೊನೆಯ ಕೊಂಡಿಯಂತಿದ್ದವರು ಸ್ವಾಮಿ ಲಕ್ಷ್ಮಣಜೂ; ಅವರು ಕೆಲವು ವರ್ಷಗಳ ಹಿಂದೆಯಷ್ಟೇ ತೀರಿಕೊಂಡರು. ನನ್ನ ಭಾವಸ್ಮೃತಿಯ ಕಾಶ್ಮೀರ ಈಗ ಭವಕಾಶ್ಮೀರದಲ್ಲಿಯೂ ತೋರಿಕೊಳ್ಳಬೇಕಾದರೆ, ನಮಗೆ ಸಂಸ್ಕೃತಿಯ ಮೂಲಸ್ರೋತ ಯಾವುದು ಎಂಬುದರ ಪ್ರತ್ಯಭಿಜ್ಞಾನವಾಗಬೇಕು. ಪ್ರಕಾಶ–ವಿಮರ್ಶನದ ಈ ಪ್ರಕ್ರಿಯೆಗೆ ಆಧಾರಶ್ರುತಿಯಾಗತಕ್ಕದ್ದು – ನಾವು ಸಂಸ್ಕೃತಿಯನ್ನು ಜನರ ಭಾವಶ್ರೀಯಲ್ಲಿ ಕಾಣುತ್ತೇವೆಯೋ ಅಥವಾ ಜಡವಾಗಿರುವ ಕಲ್ಲುಮಣ್ಣುಗಳ ಭವದಲ್ಲಿ ಹುಡುಕುತ್ತೇವೆಯೋ ಎಂಬ ವಿವೇಕದ ಶಿವದೃಷ್ಟಿಯೇ ಹೌದು. ■

### ಮಂಜಿನ ಮಳೆಯೋ ಮರಳಿನ ಬಯಲೋ!

ಜಮ್ಮು ಕಾಶ್ಮೀರ ಎಂದರೆ ಹಾಸಿದ ಹಿಮ ತರುವ ಥಂಡಿ ಹವೆಯ ನಡುಕವೇ ನೆನಪಾಗುತ್ತದೆ. ಆದರೆ ಇಂಥ ಹಿಮಜಗದ ನಡುವೆಯೇ ಮರಳುಗಾಡೊಂದಿದೆ ಗೊತ್ತೇ? ಅದರ ಹೆಸರು ನುಬ್ರಾ ಕಣಿವೆ!

ಸುತ್ತಲಿನ ಪರ್ವತಗಳೆಲ್ಲ ಹಿಮದ ಟೋಪಿ ಧರಿಸಿ ಇಣುಕಿ ನೋಡುತ್ತಿದ್ದರೆ ನೆಲದ ಮೇಲೆ ಮಾತ್ರ ಉದ್ದೋಉದ್ದಕ್ಕೆ ಮರಳು ಹಾಸಿರುತ್ತದೆ. ಮರಳುದಿಣ್ಣೆಗಳ ಮೇಲೆ ಎರಡು ಡುಬ್ಬದ ಒಂಟೆಗಳ ಸವಾರಿಯೂ ಸಾಗಿರುತ್ತದೆ. ಆ ಕ್ಷಣಕ್ಕೆ ನಾವಿರುವುದು ಕಾಶ್ಮೀರದಲ್ಲಾ ಅಥವಾ ರಾಜಸ್ಥಾನದಲ್ಲಾ ಎಂದು ಅನುಮಾನ ಬಂದರೂ ಬಂದೀತು.

ಲಡಾಖ್ ಪ್ರಾಂತ್ಯದಲ್ಲಿರುವ ಈ ನುಬ್ರಾ ಕಣಿವೆ ಬಹುಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಜಾಗವೂ ಹೌದು. ಪ್ಯಾಂಗಾಂಗ್ ಸರೋವರ, ಖರ್ದುಂಗ್ ಲಾ ಪಾಸ್ ಈ ಕಣಿವೆಯ ಅಂಗಳದಲ್ಲಿಯೇ ಇವೆ. ಹಾ... ಸೌಂದರ್ಯಕ್ಕೆ ಮರುಳಾಗಿ ಮೈಮರೆತರೆ ಗುಂಡಿನ ಸದ್ದೂ ಮೊರೆಯಬಹುದು. ಹೌದು, ಚೀನಾ ಮತ್ತು ಪಾಕಿಸ್ತಾನ ಎರಡೂ ದೇಶಗಳ ಗಡಿ ನುಬ್ರಾ ಕಣಿವೆಯಿಂದ ಕೂಗಳತೆಯ ದೂರದಲ್ಲಿವೆ. ಈ ಕಣಿವೆಯಿಂದ ಮೂವತ್ತು ಕಿಲೋಮೀಟರ್ ಕ್ರಮಿಸಿದರೆ ಸಿಯಾಚಿನ್ ಮುಟ್ಟಬಹುದು. 1950ರವರೆಗೂ ಈ ಕಣಿವೆ ಭಾರತ ಮತ್ತು ಚೀನಾ ದೇಶಗಳ ಜನರು ಸಂಚರಿಸುವ ಕಾಲ್ದಾರಿಯೂ ಆಗಿತ್ತು! ನಂತರ ಭದ್ರತಾ ಕಾರಣಗಳಿಗಾಗಿ ಈ ದಾರಿಯನ್ನು ಮುಚ್ಚಲಾಗಿದೆ.